# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಸಿದ್ಧಾಪುರ

**ಸಿ.ಸಿ.144/2026**

ಫಿರ್ಯಾದಿಃ ಸಿದ್ದಾಪುರ ತಾಲೂಕಾ ವ್ಯವಸಾಯ ಹುಟ್ಟುವಳಿಗಳ
ಸಹಕಾರಿ ಮಾರಾಟ ಸಂಘ.ನಿ. ಸಿದ್ದಾಪುರ.
ಇದರ ಪ್ರತಿನಿಧಿಯಾಗಿ ಶ್ರೀ ಕೆ.ಸಿ ಗೌಡ ಕರಣಿಕರು.,
51 ವರ್ಷ, ಸಿದ್ಧಾಪುರ ತಾಲೂಕು. ಉ.ಕ.

-ವಿರುದ್ದ-

ಆರೋಪಿಃ ಶ್ರೀ. ನರಸಿಂಹ ಸುಬ್ರಾಯ ಹೆಗಡೆ ಬನಗೆರೆ.
ವಯಸ್ಸುಃ 65 ವರ್ಷ, ವೃತ್ತಿಃ ವ್ಯಾಪಾರ,
ಪ್ರೊಪ್ರೈ ಟರ್ಃ ಶ್ರೀಯ ಟ್ರೇಡರ್ಸ,
ವಾಸಃ ಬನಗೆರೆ, ಕಲಗದ್ದೆ-ಕಂಚಿಗದ್ದೆ,
ಮೆಣಸಿ ಪೋಸ್ಟ, ಶಿರಸಿ ತಾಲೂಕು. ಉ.ಕ.

ನಾನು **ಶ್ರೀ. ಹರೀಶಕುಮಾರ್.ಎಮ್. ಬಿ.ಕಾಂ., ಎಲ್.ಎಲ್.ಬಿ.,** ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಸಿದ್ಧಾಪುರ ಆದ ನಾನು, ಆರೋಪಿತನಾದ ನಿನ್ನ ಮೇಲೆ ಈ ಕೆಳಗಿನಂತೆ ಆರೋಪ ಹೊರಿಸುತ್ತಿದ್ದೇನೆ.

## ಆಪಾದನೆ

ನ್ಯಾಯಾಲಯದ ವ್ಯಾಪ್ತಿಯಲ್ಲಿರುವ ಫಿರ್ಯಾದುದಾರರು ಸಿದ್ದಾಪುರ ತಾಲೂಕಾ ವ್ಯವಸಾಯ ಹುಟ್ಟುವಳಿಗಳ ಸಹಕಾರಿ ಮಾರಾಟ ಸಂಘ.ನಿ ಸಂಸ್ಥೆಯು ಕರ್ನಾಟಕ ಸೌಹಾರ್ದಾ ಕೋ-ಆಪರೇಟಿವ್ ಕಾಯ್ದೆ ರಡಿಯಲ್ಲಿ ನೊಂದಾಯಿತ ಸಂಸ್ಥೆಯಾಗಿದ್ದು ಕಳದ ಅನೇಕ ವರ್ಷಗಳಿಂದ ಅಡಿಕೆ ಕಾಳುಮೆಣಸು, ಯಾಲಕ್ಕಿ ಮುಂತಾದ ವ್ಯವಸಾಯ ಹುಟ್ಟುವಳಿಗಳ ವ್ಯಾಪಾರ ವಾಹಿವಾಟು ನಡೆಸುವ ಸಹಕಾರಿ ಸಂಘವಾಗಿದೆ. ಆರೋಪಿತನಾದ ನೀನು ಫಿರ್ಯಾದುದಾರರ ಸಹಕಾರಿ ಸಂಘದಲ್ಲಿ ಸದಸ್ಯನಾಗಿದ್ದು, ಸಂಘದಲ್ಲಿ ಹುಟ್ಟುವಳಿಗಳನ್ನು ಟೆಂಡರ್ ಪ್ರಕ್ರಿಯೆಯಂತೆ ನೀಡಲಾಗುತ್ತಿತ್ತು, ಆರೋಪಿತನಾದ ನೀನು ಕಾನಸೂರ ಶಾಖೆಯಲ್ಲಿ ಕಳೆದ ಅನೇಕ ವರ್ಷಗಳಿಂದ ಅಡಿಕೆ ಖರೀದಿ ವ್ಯವಹಾರ ಮಾಡುತ್ತಾ ಬಂದಿದ್ದು, ಅಡಿಕೆ ತೆಗೆದುಕೊಂಡು ಹೋದ ಬಾಬ್ತು ಪಿರ್ಯಾದುದಾರರ ಸಂಘಕ್ಕೆ ಬಾಕಿ ಉಳಿಸಿಕೊಂಡಿದ್ದು, ಫಿರ್ಯಾದುದಾರರ ಸಂಸ್ಥೆಯು ಹಲವು ಬಾರಿ ಸಾಲದ ಪಾವತಿಗಾಗಿ ಬೇಡಿಕೆ ಇಟ್ಟಿದ್ದು, ಸದರಿ ಸಾಲದ ಈಗಿನ ಬಾಕಿ ಮೊತ್ತವು ರೂ.

24,86,500/- ಆಗಿದ್ದು ಹಾಗೂ ಸದರಿ ಸಾಲದ ಬಾಬ್ತಿಗಾಗಿ ಆರೋಪಿತನಾದ ನೀನು ದಿನಾಂಕಃ 17.01.2026 ರಂದು ಬ್ಯಾಂಕ್ ಆಫ್ ಬರೋಡಾ, ಶಿರಸಿ ಶಾಖೆಯ ಚೆಕ್ಕಿನ ಸಂಖ್ಯೆ 000395 ನ ರೂ.24,86,500/- ನ ಚೆಕನ್ನು ನೀಡಿದ್ದು, ತದನಂತರ ಸಹಕಾರಿ ಸಂಸ್ಥೆಯು ಸದರಿ ಚೆಕನ್ನು ನಗದು ಗೊಳಿಸಲು KDCC ಬ್ಯಾಂಕ್, ಕಾನಸೂರ, ಸಿದ್ದಾಪುರ ಶಾಖೆಗೆ ಹಾಕಿದಾಗ ಆರೋಪಿತನಾದ ನೀನು ಆ ಬ್ಯಾಂಕಿನಲ್ಲಿ ವ್ಯವಹಾರ ಸ್ಥಗಿಸಗೊಳಿಸಿದ್ದರಿಂದ Refer to drawer(Account Closed) ಎಂಬ ಹಿಂಬರಹದೊಂದಿಗೆ ವಾಪಸ್ ಬಂದಿರುವುದಾಗಿ ಮತ್ತು ಸದರಿ ವಿಷಯವನ್ನು ದಿಃ 21.02.2026 ರಂದು ಅವರ ವಕೀಲರ ಮೂಲಕ ನೋಟಿಸ್ಸು ನೀಡಿ ತಿಳಿಸಿರುವುದಾಗಿ, ಸದರಿ ನೋಟಿಸ್ಸನ್ನು ಆರೋಪಿತನಾದ ನೀನು ದಿನಾಂಕ 24.02.2026 ರಂದು ಪಡೆದುಕೊಂಡಿದ್ದರೂ ನೀನು ಹಣವನ್ನು ಮರುಪಾವತಿ ಮಾಡದೇ **ನೆಗೊಷಬಲ್ ಇನ್ಸ್ಟುಮೆಂಟ್ ಆಕ್ಟ ರ 138** ಅಡಿಯಲ್ಲಿ ಅಪರಾದ ಎಸುಗಿರುವಿರೆಂದು ನಿನ್ನ ಮೇಲೆ ಆರೋಪಣೆ ಇದೆ ಮತ್ತು ಸದ್ರಿ ಆರೋಪಣೆಯನ್ನು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀಯಾ ಎಂದು ಆರೋಪಿಸಲಾಗಿದೆ.

ಈ ಮೇಲ್ಕಂಡ ಆರೋಪಣೆಗೆ ನೀನು ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸಿರುತ್ತೇನೆ .

ಪ್ರಶ್ನೆಃ 1. ಈಗ ನಿನಗೆ ಮೇಲೆ ಓದಿ ಹೇಳಿ ವಿವರಿಸಿದ ಆರೋಪಣೆ ತಿಳಿಯಿತೆ ?

**ಉತ್ತರಃ**

ಪ್ರಶ್ನೆಃ 2. ನೀನು ಈ ಮೇಲಿನ ಆರೋಪಣೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ನಿನ್ನ ವಿರುದ್ದ ವಿಚಾರಣೆ ನಡೆಯಬೇಕೆ?

**ಉತ್ತರಃ**

**ಪ್ರಶ್ನೆಃ 3** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ-1 ಚೆಕ್ಕಿನ ನಂ 000395 ನಿಮ್ಮ Bank of Baroda ಖಾತಾ ನಂ. 64480200000005 ಖಾತೆಗೆ ಸಂಬಂಧಿಸಿದ ಚೆಕ್ ಆಗಿರುತ್ತದೆ ಎಂಬುದನ್ನು ಒಪ್ಪಿಕೊಳ್ಳುವಿರಾ?

**ಉತ್ತರಃ**

**ಪ್ರಶ್ನೆಃ 4** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ–1 ಚೆಕ್ಕಿನ ನಂ 000395 ಮೇಲಿನ ಸಹಿ ನಿಮ್ಮದೇ ಎಂದು ಒಪ್ಪಿಕೊಳ್ಳುವಿರಾ?

**ಉತ್ತರಃ**

**ಪ್ರಶ್ನೆಃ 5** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ–1 ಚೆಕ್ಕಿನ ನಂ 000395 ನ್ನು ಪಿರ್ಯಾದಿ ಸೊಸೈಟಿಗೆ ನೀಡಿರುವುದಾಗಿ ನೀವು ಒಪ್ಪಿಕೊಳ್ಳುವಿರ?

**ಉತ್ತರಃ**

**ಪ್ರಶ್ನೆಃ 6** ಪಿರ್ಯಾದಿ ಸೊಸೈಟಿಯಿಂದ ರೂ. 24,86,500/– ಮೌಲ್ಯದ ಅಡಿಕೆಯನ್ನು ಪಡೆದಿರುವಿರಾ?

**ಉತ್ತರಃ**

**ಪ್ರಶ್ನೆಃ 7** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ–1 ಚೆಕ್ಕಿನ ನಂ 000395 ದಿನಾಂಕ 17.01.2026 ರಲ್ಲಿ ನಮೂದಿಸಿದ ರೂ.24,86,500/– ನ್ನು ( ಇಪ್ಪತ್ತನಾಲ್ಕು ಲಕ್ಷದ ಎಂಬತ್ತಾರು ಸಾವಿರದ ಐದು ನೂರು ರೂಪಾಯಿ ಮಾತ್ರ) ಪಿರ್ಯಾದಿ ಸೊಸೈಟಿಗೆ ಪಾವತಿ ಮಾಡುವ ಭಾಧ್ಯತೆಯನ್ನು ನೀವು ಒಪ್ಪಿಕೊಳ್ಳುವಿರಾ?

**ಉತ್ತರಃ**

**ಪ್ರಶ್ನೆಃ 8** ಈ ಹಂತದಲ್ಲಿ ಈ ಪ್ರಕರಣವನ್ನು ರಾಜೀ ಮಾಡಿಕೊಳ್ಳಲು ಇಚ್ಚಿಸುವಿರಾ?

**ಉತ್ತರಃ**

ಸದ್ರಿ ಮೇಲಿನ ಆರೋಪಣೆಗಳನ್ನು ತೆರೆದ ನ್ಯಾಯಾಲಯದಲ್ಲಿ ದಿಃ **04–07–2026** ರಂದು ಆರೋಪಿತನಿಗೆ ಓದಿ ಹೇಳಿ, ಕೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ಸಿದ್ದಾಪುರ.**